ಆ) ಇವರಿಗೆ ನೀಡುವ ಮಾಸಿಕ ವೇತನ ಎಷ್ಟು ?

ಇ) ಇವರ ವೇತನವನ್ನು ಹೆಚ್ಚು ಮಾಡಲಾಗಿದೆಯೆ, ಇಲ್ಲವಾದಲ್ಲಿ ಇವರ ವೇತನ ಪರಿಷ್ಕರಣ ಸರ್ಕಾರದವರು ಶೀಘ್ರ ಮಾಡುವರೆ ?

ಶ್ರೀ ಎಸ್ ಆರ್. ಬೊಮ್ಮಾಯಿ(ಕಂದಾಯ ಮತ್ತು ಯೋಜನಾ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫೭೦ ಉಗ್ರಾಣಿಗಳು(ಗ್ರಾಮ ಸಹಾಯಕರು)ಇದ್ದಾರೆ.

ಆ) ಇವರುಗಳಿಗೆ ತಿಂಗಳಿಗೆ ೩೦೦–ರೂ.ಗಳ ನಿಗಧಿತ ಸಂಭಾವನೆ ಪಾವತಿ ಮಾಡಲಾಗುತ್ತಿದೆ.

ಇ) ಹೌದು. ದಿನಾಂಕ ೧-೧೧-೮೬ ರಿಂದ ಇವರುಗಳಿಗೆ ಪ್ರತಿ ತಿಂಗಳು ಕೊಡುವ ಸಂಭಾವನೆಯನ್ನು ೧೫೦–ರೂ.ಗಳಿಂದ ೩೦೦–ರೂ.ಗಳಿಗೆ ಹೆಚ್ಚಿಸಲಾಗಿದೆ. ವೇತನ ಪರಿಷ್ಕರಣಕ್ಕಾಗಿ ಮನವಿಗಳು ಬಂದಿದ್ದು, ಅವುಗಳನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫೭೦ ಗ್ರಾಮಗಳಲ್ಲಿ ಉಗ್ರಾಣಿಗಳು (ಗ್ರಾಮ ಸೇವಕರು)ಇದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅನೇಕ ಕಡೆಗಳಲ್ಲಿ ಗ್ರಾಮ ಸೇವಕರು ಇಲ್ಲದೆ ಅಲ್ಲಿ ಕೆಲಸಕಾರ್ಯಗಳು ಮಂದಗತಿಯಲ್ಲಿ ನಡೆಯುತ್ತಿರುವುದು ಸಚಿವರ ಗಮನಕ್ಕೆ ಬಂದಿದೆಯೇ?

ಶ್ರೀ ವೀರಣ್ಣ.—ಗ್ರಾಮಲೆಕ್ಕಿಗರು ಇಲ್ಲದೆ ಇದ್ದಾಗ ಬಹುಶಃ ಇವರದ್ದೇ ಹೆಚ್ಚಿನ ಕೆಲಸ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಅವರಿಗೆ ಕೊಡತಕ್ಕ ಸಂಬಳ ಮೊದಲು ಕೇವಲ ೧೫೦ ಇದ್ದುದನ್ನು ಅವರ ಕೆಲಸ ಕಾರ್ಯಗಳನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ಸಂಬಳವನ್ನು ೩೦೦ ರೂಪಾಯಿಗಳಿಗೆ ಹೆಚ್ಚು ಮಾಡಿದೆ.. ಅದಕ್ಕಿಂತ ಹೆಚ್ಚಿಗೆ ಮಾಡತಕ್ಕ ಪ್ರಶ್ನೆ ಸರ್ಕಾರದ ಮುಂದೆ ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಇನ್ನೂ ಕೆಲವು ಗ್ರಾಮಗಳಲ್ಲಿ ಗ್ರಾಮ ಸೇವಕರು ಇಲ್ಲದೆ ಕೆಲಸ ಮಾಡುವುದು ಕಷ್ಟವಾಗಿದೆ ಅವರಿಗೆ ಕೊಡತಕ್ಕ ಸಂಬಳ ೩೦೦ ರೂಪಾಯಿಗಳು. ಅವರು ಇಷ್ಟು ಗ್ರಾಮಗಳನ್ನು ಸುತ್ತಾಡಿ ಎಲ್ಲವನ್ನೂ ನೋಡಬೇಕು. ಅವರ ವೇತನವನ್ನು ಪರಿಷ್ಕರಣ ಮಾಡಿ ಎಂಬುದಾಗಿ ಕೇಳಿಕೊಳ್ಳುತ್ತಿದ್ದೇನೆ. ಅವರು ಬಹಳ ಕಷ್ಟದಲ್ಲಿರತಕ್ಕ ಜನ. ೩೦೦ ರೂಪಾಯಿಗಳು ಈಗಿನ ಕಾಲದಲ್ಲಿ ಯಾವುದಕ್ಕೂ ಸಾಕಾಗುವುದಿಲ್ಲ.

ಶ್ರೀ ವೀರಣ್ಣ.—ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಸದ್ಯಕ್ಕೆ ಆ ಪ್ರಶ್ನೆ ಸರ್ಕಾರದ ಮುಂದೆ ಇಲ್ಲ.

ಖಾಸಗಿ ಸಕ್ಕರೆ ಕಾರ್ಖಾನೆಗಳ ಬಗ್ಗೆ

೯೮ (ಳಿಳಿ ಇ) ಶ್ರೀ ಬಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ರಾಜ್ಯದಲ್ಲಿ ಎಷ್ಟು ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಹಸ್ತಾಂತರಿಸಲಾಗಿದೆ ?

(ಆ) ಇದಕ್ಕೆ ಕಾರಣವೇನು ? ಹಸ್ತಾಂತರದ ಪರತ್ತು ಹಾಗೂ ಮೌಲ್ಯಗಳೇನು ?

(ಇ) ಯಾವುದಾದರು ಬೇರೆ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಮಾರುವ ಯೋಜನೆ ಇದೆಯೇ ? ಹಾಗಿದ್ದಲ್ಲಿ ಅವು ಯಾವುವು ಮತ್ತು ಯಾವಾಗ ?

ಶ್ರೀ ಆರ್, ಬಿ. ಪೋತ್‌ದಾರ್ (ಕೈಗಾರಿಕಾ ಸಹಕಾರ ಮಂತ್ರಿಗಳು).—

ಅ) ಒಂದೇ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯಾದ ಶ್ರೀ ಮಹದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ಕೊಳ್ಳೇಗಾಲ, ಮೈಸೂರು ಜಿಲ್ಲೆ ಇದನ್ನು ಮೇ · ಖೋಡೆ ಡಿಸ್ಟಿಲರೀಸ್ ರವರಿಗೆ ಮಾರಾಟ ಮಾಡಲಾಗಿದೆ.

ಆ) ಮಾರಾಟ ಮಾಡಲು ಕಾರಣಗಳು :

೧) ಕಬ್ಬು ಅರೆಯಲು ಸಾಕಷ್ಟು ಕಬ್ಬು ದೊರೆಯಲಿಲ್ಲವಾದ್ದರಿಂದ ೧೯೮೪-೮೫ನೇ ಸಾಲಿನಿಂದ ಕಬ್ಬು ಅರೆಯುವುದನ್ನು ನಿಲ್ಲಿಸಲಾಯಿತು. ಆದರ ಪಲಿತಾಂಶದಿಂದ ೨೩-೧೨-೧೯೮೫ರಿಂದ ಕಾರ್ಖಾನೆಯ ನೌಕರರನ್ನು ಲೇ ಆಫ್ ಮಾಡಲಾಯಿತು.

೨) ಕಾರ್ಖಾನೆಯು ಒಟ್ಟು ೧೨.೦೬ ಕೋಟಿ ರೂಗಳ ನಷ್ಟವನ್ನು ಅನುಭವಿಸಿರುತ್ತದೆ. ಕಾರ್ಖಾನೆಯು ಲಾಭದಾಯಕವಲ್ಲದ ಕಬ್ಬು ಅರೆಯುವಿಕೆ ಮತ್ತು ಕಬ್ಬಿಗೆ ಹೆಚ್ಚಿನ ಬೆಲೆಯನ್ನು ನೀಡಿರುವುದು ಕಾರ್ಖಾನೆಯು ಹೆಚ್ಚಿನ ಮೊತ್ತದ ನಷ್ಟ ಅನುಭವಿಸಲು ಕಾರಣವಾಗಿರುತ್ತದೆ.

೩) ಕಾರ್ಖಾನೆಯನ್ನು ೫೮೪.೦೦ ಲಕ್ಷ ರೂ, ಗಳ ವೆಚ್ಚದಲ್ಲಿ ಪುನರುಜ್ಜೀವನ ಗೊಳಿಸಲು ಸೂಚಿಸಲಾಗಿತ್ತು.ಆದರೆ ಕಾರ್ಖಾನೆಯನ್ನು ಪುನರುಜ್ಜೀವನ ಗೊಳಿಸಲು ನೇಮಿಸಿದ ಸಮಿತಿಯು, ರಾಜ್ಯ ಸರಕಾರಕ್ಕೆ ಹೆಚ್ಚಿನ ಹೊರೆಯಾಗುವುದೆಂದು ಪುನರುಜ್ಜೀವನ ಕಾರ್ಯಕ್ಕೆ ಹೋಗಬಾರದೆಂದು ಸಮಿತಿಯು ತೀರ್ಮಾನಿಸಿತ್ತು. (ಷರತ್ತುಗಳುಅನುಬಂಧದಲ್ಲಿದೆ.)

೪) ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ಗೌರಿಬಿದನೂರು. ಕೋಲಾರಜಿಲ್ಲೆ ಇದು ಸಮಾಪನ ಕಾರ್ಯದ ಅಂತಿಮ ಘಟ್ಟದಲ್ಲಿರುತ್ತದೆ. ಆದರೆ ಕಾರ್ಖಾನೆಯ ಆಸ್ತಿಯನ್ನು ಮಾರಾಟ ಮಾಡಲು ಅಂತಿಮ ತೀರ್ಮಾನವನ್ನು ಇನ್ನೂ ತೆಗೆದುಕೊಂಡಿರುವುದಿಲ್ಲ.

ಅನುಬಂಧ-ಅ

ಮಾರಾಟ ಮಾಡಲು ನಿಗದಿ ಪಡಿಸಿದ ಷರತ್ತುಗಳು.ಮತ್ತು ಮಾರಾಟ ವೆಚ್ಚಗಳು:—

೧. ಮಾರಾಟಗಾರರು ಕೊಳ್ಳುವವರಿಗೆ ಮಾರಾಟ ಮಾಡಲು ಒಪ್ಪಿದ್ದು ಕೊಳ್ಳುವರು ಮಾರಾಟಗಾರರಿಂದ ಮೈಸೂರು ಜಿಲ್ಲೆ ಕೊಳ್ಳೆಗಾಲ ತಾಲ್ಲೂಕು ಕುಂತೂರು ಗ್ರಾಮದಲ್ಲಿರುವ ಭೂಮಿ ಮತ್ತು ಕಟ್ಟಡಗಳನ್ನು ಮತ್ತು ಜೋಡಿಸಿರುವ ಸ್ಥಿರ ಯಂತ್ರ ಮತ್ತು ಯಂತ್ರ ಬಿಡಿಭಾಗಗಳು, ಸ್ಪೇರ್ಸ್ ಮೋಟಾರ್ ವೆಹಿಕಲ್ಸ್, ಫೀಠೋಪಕರಣಗಳನ್ನು ಸ್ಥಾಪಿಸಿರುವ ಅಥವಾ ಕಾರ್ಖಾನೆಯ ಆವರಣದಲ್ಲಿರುವುದನ್ನೂ ಸಹ ಮಾರಾಟದ ಮೊತ್ತವಾದ ರೂ. ೫.೪೯ ಕೋಟಿ ರೂಗಳಿಗೆ ಕೊಳ್ಳಲು ಖರೀದಿದಾರರು ಒಪ್ಪಿರುತ್ತಾರೆ.

೨. ಖರೀದಿದಾರರು ಪ್ರತಿಫಲಕ್ಕಾಗಿ ೫.೪೯ ಕೋಟಿ ರೂಗಳನ್ನು ಕೊಡಬೇಕಾಗುತ್ತದೆಂದು ೫೫ ಲಕ್ಷ ರೂಗಳನ್ನು ಭೂಮಿ ಮತ್ತು ಕಟ್ಟಡಗಳಿಗಾಗಿ ಮತ್ತು ಸ್ಥಿರಯಂತ್ರ ಮತ್ತು ಯಂತ್ರ ಬಿಡಿಭಾಗಗಳು, ಸ್ಪೇರ್ಸ್, ಮೋಟಾರ್ ವಾಹನಗಳು, ಜೋಡಿಸಿರುವವು ಮತ್ತು ಪೀಠೋಪಕರಣಗಳು ಮತ್ತು ಸಾಪಿಸಿರುವವು ಹಾಗೂ ಕಾರ್ಖಾನೆಯ ಆವರಣದಲ್ಲಿರುವವುಗಳಿಗೆ ಸಹ ಸೇರಿ ಒಟ್ಟು ೫೧೪ ಲಕ್ಷಗಳ ರೂಗಳನ್ನು ಕೊಡಬೇಕಾಗುತ್ತದೆ.

೩. ಅ) ಕರಾರಿನಲ್ಲಿ ಒಪ್ಪಿರುವಂತೆ ಸಾಲನೀಡಿಕೆ ಸಂಸ್ಥೆಗಳಿಗೆ ಒಟ್ಟು ೩.೫೫ ಕೋಟಿ ರೂಗಳನ್ನು ಬಡ್ಡಿ ಸಮೇತ ಹಂತಹಂತವಾಗ ಪಾವತಿಮಾಡಬೇಕು.

ಆ) ಕರಾರಿನಲ್ಲಿ ಒಪ್ಪಿರುವಂತೆ ಖರೀದಿದಾರರು ಒಟ್ಟು ೨.೧೪ ಕೋಟಿ ರೂಗಳನ್ನು ಹಂತಹಂತವಾಗಿ ಮಾರಾಟಗಾರರಿಗೆ ಪಾವತಿ ಮಾಡಬೇಕು.

೪. ಎರಡೂ ಪಕ್ಷಗಳಲ್ಲಿ ಕೆಳಕಂಡ ವಿಷಯಗಳ ಬಗ್ಗೆ ನಿರ್ದಿಷ್ಟವಾದ ಒಮ್ಮತವಿರುತ್ತದೆ.

ಅ) ಇತ್ಯರ್ಥವಾಗದೇ ಇರುವ ರಿಟ್ ಅರ್ಜಿಯಲ್ಲಿನ ಅಂತಿಮ ತೀರ್ಪು ಈವರಿಗೂ ಬಂಧನವಾಗಿರುತ್ತದೆ,

ಆ) ಅಗ್ರಿಮೆಂಟ್ ಐಡಿಬಿಐ ಹಾಗೂ ಇತರೆ ಹಣಕಾಸು ಸಂಸ್ಥೆಗಳ ಒಪ್ಪಿಗೆಗೆ ಒಳಪಟ್ಟಿರುತ್ತದೆ.

ಇ) ಮಾರಾಟಗಾರರು ಸೇಲ್ ಡೀಡನ್ನು ರಿಜಿಸ್ಟರು ಮಾಡಲು ಆಧಾಯ ತೆರಿಗೆಗೆ ಸಂಬಂಧಪಟ್ಟವರಿಂದ ಆಧಾಯ ತೀರಿಕೆ ಕುರಿತು ಒಪ್ಪಿಗೆ ಪತ್ರ ಪಡೆಯಬೇಕು.

೫. ಖರೀದಿದಾರರು ನಿರ್ಗಾವಣೆಯಾದ ದಿನಾಂಕದಿಂದ ಕಾರ್ಖಾನೆಯ ಹೆಸರು ಹಾಗೂ ಶೈಲಿಯನ್ನು ಬದಲಾಯಿಸಿಕೊಳ್ಳಲು ಅರ್ಹರಾಗಿರುತ್ತಾರೆ.

೬, ವಿಶೇಷವಾಗಿ ಪಕ್ಷಕಾರರಲ್ಲಿ ಒಮ್ಮತವಾಗಿ ಒಪ್ಪಿರುವಂತೆ ಹಾಲಿ ನೌಕರರು ಹಾಗೂ ಕೆಲಸದಿಂದ ತೆಗೆದುಹಾಕಿರುವ ನೌಕರರ ಸಂಬಳ, ಬಾಕಿ ಸಂಬಳ ಮತ್ತು ಇತರೆ ಬಾಕಿ ಕಾಂಪನ್‌ಸೇಷನ್, ಯಾವುದೇ ಲೆಕ್ಕದಲ್ಲಿ ಅಥವಾ ಏನಾದರೂ ಕೊಡಬೇಕಿದ್ದಲ್ಲಿ ಮಾರಾಟಗಾರರೇ ಪಾವತಿ ಮಾಡಬೇಕಾಗುತ್ತದೆ.

೭. ಮತ್ತೆ ಪಕ್ಷಕಾರರು ಒಪ್ಪಿರುವಂತೆ, ಮಾರಾಟವು ಮಾರಾಟಗಾರರು ನ್ನು ಹಾಗೂ ಕರ್ನಾಟಕ ಸರ್ಕಾರವನ್ನು ಖಾತರಿಯ ಭಾದ್ಯತೆಯಿಂದ ಖರೀದಿದಾರರು ನಿಗದಿತ ಖಾತರಿಯನ್ನು ನೀಡುವುದರ ಮೂಲಕ ಹಣಕಾಸು ಸಮಸ್ಯೆಗಳ ಖಾತರಿಯಿಂದ ಬಿಡುಗಡೆ ಮಾಡುವುದಕ್ಕೆ ಒಳಗೊಂಡಿರುತ್ತದೆ. ಜೊತೆಗೆ ಖರೀದಿದಾರರು ಸಹ ಮಾರಾಟದ ಸೇಲ್‌ಡೀಡ್ ನೋಂದಣಿಯಾಗುವ ಸಂದರ್ಭದಲ್ಲಿ ಒಟ್ಟು ಕೊಡ ಬೇಕಾದ ಖರೀದಿ ಪೊತ್ತಕ್ಕೆ ನಿಗದಿತ ಖಾತರಿಯನ್ನು ಮಾರಾಟಗಾರರಿಗೆ ಕೊಡಬೇಕಾಗುತ್ತದೆ.

೮. ಅಗ್ರಿಮೆಂಟಿನಲ್ಲಿ, ಕರ್ನಾಟಕ ಸರ್ಕಾರ ಮತ್ತು ಅದರ ಅನುಮೋದನೆ ಮತ್ತು ಆದೇಶ ಗಳು ಎಂದು ಉಲ್ಲೇಖಿಸಿದ್ದರೂ ಕರ್ನಾಟಕ ಸರ್ಕಾರವು ಈ ಅಗ್ರಿಮೆಂಟಿಗೆ ಒಂದು ಪಾರ್ಟಿಯಾಗುವುದಿಲ್ಲ ವೆಂದು ಅಥವಾ ಅಗ್ರಿಮೆಂಟಿನ ನಿಯಮ ಮತ್ತು ಷರತ್ತುಗಳಿಗೆ ಭಾದ್ಯತೆಯಾಗುವುದಿಲ್ಲವೆಂದು ಮತ್ತು ನಿಯಮ ಮತ್ತು ಷರತ್ತುಗಳು ಕರ್ನಾಟಕ ಸರ್ಕಾರಕ್ಕೆ ಬಂಧನಕಾರಿಯಾಗಿರುವುದಿಲ್ಲವೆಂದು ಖರೀದಿದಾರರಂ ಒಪ್ಪಿರುತ್ತಾರೆ.

೯. ಈ ಒಪ್ಪಿಗೆಯ ಕುರಿತು ಏನಾದರೂ ವ್ಯಾಜ್ಯ ತಲೆದೋರಿದಲ್ಲಿ ಬೆಂಗಳೂರಿನಲ್ಲಿರುವ ನ್ಯಾಯಾಲಯಗಳು ಕಾರ್ಯವ್ಯಾಪ್ತಿ ಹೊಂದಿರುತ್ತವೆ.

೧೦. ಮಾರಾಟಗಾರರು ಶ್ರೀ ಮಹದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ಕೊಳ್ಳೇ-ಗಾಲ ಇದಕ್ಕೆ ಮಂಜೂರಾಗಿದ್ದ ಕೈಗಾರಿಕಾ ಲೈಸನ್ಸ್‌ನ್ನು ಖರೀದಿದಾರರಿಗೆ ವರ್ಗಾಯಿಸಿಕೊಳ್ಳಲು ಸಹಾಯ ನೀಡಬೇಕು.

೧೧. ಖರೀದಿದಾರರು ಮಾರಾಟ ಕರಾರನ್ನು ಸಹಿಮಾಡುವಾಗ ಒಂದು ಲಕ್ಷ ರೂಗಳನ್ನು ಸಂಚಕಾರ ಠೇವಣಿಯಾಗಿ ಮಾರಾಟಗಾರರಿಗೆ ನೀಡಬೇಕು.

ಶ್ರೀ ಜಿ. ಎಸ್. ಆಚಾರ್.—ಅಧ್ಯಕ್ಷರೇ, ಒಂದೇ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯಾದ ಶ್ರೀ ಮಹದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಖೋಡೆಯವರಿಗೆ ಮಾಡಲಾಗಿದೆ ಎಂದು ಉತ್ತರಕೊಟ್ಟಿದ್ದಾರೆ. ಇದು ಸಮರ್ಪಕವಲ್ಲವೆಂದು ತಮ್ಮ ಮೂಲಕ ಹೇಳುತ್ತೇನೆ. There are so many co-operative sugar factories, out of which Mahadeshwara is one. ಆದುದರಿಂದ ಇದು ಒಂದೇ ಒಂದು ಮಹತ್ವ ಅಲ್ಲ. ಎರಡನೆಯ ದಾಗಿ ಹಸ್ತಾಂತರದ ಷರತ್ತುಗಳನ್ನು ನೋಡಿದಾಗ ಕೇವಲ ೧ ಲಕ್ಷ ರೂಪಾಯಿಗಳ ಸಂಚಕಾರ ಠೇವಣಿ ರೂಪದಲ್ಲಿ ಖೋಡೇಸ್‌ದವರಿಗೆ ಮಾರಿದ್ದಾರೆ ಉಳಿದ ೩.೩೫ ಲಕ್ಷ ರೂಪಾಯಿಗಳನ್ನು ಸಾಲ ನೀಡಿದ ಸಂಸ್ಥೆಗಳಿಗೆ ಹಂತಹಂತವಾಗಿ ಕೊಡುವುದೆ ಕರಾರಿನಲ್ಲಿ ಒಪ್ಪಿರುವಂತೆ ಖರೀದಿದಾರರು ಒಟ್ಟು ೨.೧೪ ಕೋಟಿ ರೂಪಾಯಿಗಳನ್ನು ಹಂತಹಂತವಾಗಿ ಮಾರಾಟಗಾರರಿಗೆ ಪಾವತಿ ಮಾಡಬೇಕು. That means, initially, ೧ ಲಕ್ಷ ರೂಪಾಯಿ ಕೊಟ್ಟುಬಿಟ್ಟರೆ ಇಷ್ಟು ದೊಡ್ಡ ಕಾರ್ಖಾನೆ ಅವರಿಗೆ. ಅಲ್ಲಿ ೧೨.೬ ಕೋಟಿ ರೂಪಾಯಿನಷ್ಟು ಇರಬಹುದು. ಆದರೆ ಆ ಕಾರ್ಖಾನೆ ಮೇಲೆ ರೈತರು ಬಂಡವಾಳವನ್ನು ಹಾಕಿದ್ದಾರೆ. ಅಲ್ಲಿ ಸರ್ಕಾರದ ೧.೨೨ ಲಕ್ಷ ರೂಪಾಯಿಗಳ ಬಂಡವಾಳ ಇದೆ. ಹಣಕಾಸು ಸಂಸ್ಥೆಗಳವರಿಗೆ ೩.೩೫ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಇಷ್ಟೆಲ್ಲಾ ಇರುವಾಗ ಕೇವಲ ೧ ಲಕ್ಷ ರೂಪಾಯಿಗಳ ಸಂಚಕಾರಕ್ಕೆ ಕೊಡಲಾಗಿರುವುದು ಸರಿಯೇ ?

ಶ್ರೀ ಆರ್. ಬಿ. ಪೋತ್‌ದಾರ್.—ತಾವು ಕಂಡಿಷನ್‌ಗಳು ಏನಿವೆ ಎಂದು ಕೇಳಿರುವುದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ. ಇನ್ನೂ ಹೆಚ್ಚಿನ ಮಾಹಿತಿ ಬೇಕಾದರೆ I can provide you afterwards. ಕಂಡೀಷನ್ ಏನು ಏನು ಹಾಕಿದ್ದರು ಅದು ಎಲ್ಲಾ ಆಗಿಹೋಗಿದೆ. I cannot make any changes now.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರು ಸ್ಪೆಸಿಫಿಕ್ಕಾಗಿ ಕೇಳುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನ ಆಸ್ತಿಯನ್ನು ಕೇವಲ ೧ ಲಕ್ಷರೂಪಾಯಿಗೋಸ್ಕರ ಹಸ್ತಾಂತರ ಮಾಡಿದ್ದಾದು ಏಕೆ ? ಅಲ್ಲಿ ಳಿಳ ಲಕ್ಷ ರೂಪಾಯಿಗಳು ರೈತರ ಬಂಡವಾಳ ಇದೆ. ಬೇರೆ ಹಣಕಾಸು ಸಂಸ್ಥೆಗಳ ಬಂಡವಾಳ ಇದೆ. ಇಷ್ಟು ಇರುವಾಗ ಕೇವಲ ಒಂದೇ ಒಂದು ಲಕ್ಷ ರೂಪಾಯಿಗೆ ಇದನ್ನು ಕೊಡಬೇಕಾದರೆ ಕಾರಣ ಏನು ?

ಶ್ರೀ ಆರ್. ಬಿ. ಪೋತ್‌ದಾರ್.—ಆ ಬಗ್ಗೆ ಕಂಡಿಷನ್ ಏನು ಇದೆ ಅದನ್ನು ಕೊಟ್ಟಿದ್ದೇನೆ. ಕಂಡೀಷನ್ ಏಕೆ ಮಾಡಿದ್ದೀರಿ ಎನ್ನುವುದನ್ನು ಕೇಳುವುದು ಇದ್ದರೆ.

(Interruptions)

ಶ್ರೀ ಜಿ. ಎಸ್. ಆಚಾರ್.—ತಾವು ಏಕೆ ಈ ರೀತಿ ಉತ್ತರ ಕೊಡುತ್ತೀರಿ ?

(Interruptions)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕೋಟ್ಯಾಂತರ ರೂಪಾಯಿಗಳನ್ನು ೧ ಲಕ್ಷ ರೂಪಾಗಳಿಗೆ ಕೊಡಬೇಕಾದರೆ ಏನು ಸ್ವಾಮಿ ?

ಶ್ರೀ ರಮೇಶ್ ಕುಮಾರ್.—ಜೋಡೆ ಸ್‌ನವರಿಗೆ ಏನು ಹಣ ಇಲ್ಲವೇ ? ಕೇವಲ ೧ ಲಕ್ಷ ರೂಪಾಯಿಗಳನ್ನು ಕೊಟ್ಟು ಪಡೆಯಬೇಕಾದರೆ ಇದಕ್ಕೆ ಅರ್ಥ ಇಲ್ಲವೇ ? ಇದು ಸರ್ಕಾರದ ನೀತಿಯ ಪ್ರಶ್ನೆ. ಯಾರು ಬಡಪರು ಕೊಂಡರೆ ಆ ಪ್ರಶ್ನೆ ಬೇರೆ.

SRi R. B. POTDAR.—Rs. I lakhs paid only at the time of sale agreement. Rs. 134 lakhs paid at the time of sale deed.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸ್ಪಷ್ಟವಾಗಿ ತಾವು ಉತ್ತರ ಕೊಟ್ಟಿಲ್ಲ. ಆಚಾರ್ ಅವರು ಸ್ಪಷ್ಟವಾಗಿ ಕೇಳಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಕೇವಲ ಪ್ರಿಲಿಮಿನರಿಯಾಗಿ 4 ಲಕ್ಷ ರೂಪಾಯಿಗಳಿಗೆ ಹ್ಯಾಂಡ್ ಓವರ್ ಮಾಡಿದ್ದುದು ಏಕೆ ?

ಅಧ್ಯಕ್ಷರು.—ಕೋಟ್ಯಾಂತರ ರೂಪಾಯಿಗಳ ಕಿಮ್ಮತ್ತಿನ ಸಕ್ಕರೆ ಕಾರ್ಖಾನೆಯನ್ನು ಕೇವಲ ೧ ಲಕ್ಷ ರೂಪಾಯಿಗಳಿಗೆ ಏಕೆ ಕೊಟ್ಟಿರಿ ಎಂದು ಕೇಳುತ್ತಿದ್ದಾರೆ.

SRI R. B. POTDAR.—Hon. member has asked about terms and conditions Whatever terms and conditions are there I have explained. Terms ಎಂದು ಕೇಳಿದ್ದಾರೆ. ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ರಮೇಶ್‌ಕುಮಾರ್.—ಇದು ಗಹನವಾದ ವಿಚಾರವಾದ್ದರಿಂದ ಅರ್ಧಗಂಟೆ ಚರ್ಚೆ ಮಾಡಲು ಈ ಬಗ್ಗೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಆರ್. ಬಿ. ಪೋತ್‌ದಾರ್.—ತಪ್ಪಿಗೆ ಡೀಟೇಲ್ಸ್ ಬೇಕಾದರೆ ನಾನು ಮತ್ತೊಮ್ಮೆ ಕೊಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಬಡವರಿಗೆ ಸಹಾಯ ಮಾಡಬೇಕಾದರೆ ೨೦ ಸಾರಿ ಹಿಂದೆ ಮುಂದೆ ನೋಡುತ್ತೀರಿ. ಜೋಡೇಸ್‌ನಂತಹ ರಾಜಕೀಯ ಮಾಡತಕ್ಕ ಜನರಿಗೆ ಈ ರೀತಿ ಕನ್‌ಸೆಷನ್ ಕೊಡತಕ್ಕ ಪ್ರಯತ್ನ ಮಾಡುತ್ತೀರಿ. ಇದು ಒಳ್ಳೆಯ ರೀತಿ ಅಲ್ಲ. ಇದನ್ನು ಬದಲಾವಣೆ ಮಾಡಬೇಕು.

ಶ್ರೀ ರಮೇಶ್ ಕುಮಾರ್.—ಜನಜೀವನವನ್ನೇ ಅಸ್ತವ್ಯಸ್ತ ಮಾಡತಕ್ಕಂತಹ ಜನ ಅವರು. ಅವರಿಗೆ ಇದನ್ನು ಮಾರಾಟ ಮಾಡಿದ್ದೀರಿ.

ಶ್ರೀಮತಿ ಲೀಲಾದೇವಿ. ಆರ್ ಪ್ರಸಾದ್.—ಒಂದು ಹಳೆಯ ಕಾರನ್ನು ಸಹ ೫೦ ಸಾವಿರ ರೂಪಾಯಿಗಳಿಗೆ ಕೊಡುವುದಕ್ಕಾಗುವುದಿಲ್ಲ. ಅಥವಾ ದರಲ್ಲಿ ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಕೇವಲ ೧ ಲಕ್ಷಕ್ಕೆ ಕೊಡುವುದಕ್ಕಾಗುತ್ತದೆಯೆ ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಒಂದು ಸಕ್ಕರೆ ಕಾರ್ಖಾನೆಯನ್ನು ಮಾಡಬೇಕಾದರೆ ಏನು ತೊಂದರೆಯಾಗುತ್ತದೆ ಎನ್ನುವುದು ಸರ್ಕಾರಕ್ಕೆ ಗೊತ್ತಾಗುವುದಿಲ್ಲವೆ ? ಒಂದೇ ಸಕ್ಕರೆ ಕಾರ್ಖಾನೆಯನ್ನು ಮಾಡಬೇಕಾದರೆ ಕಾಲೊಳಗಿನ ಚಪ್ಪಲಿ ತಲೆಯ ಮೇಲೆ ಬರುತ್ತವೆ. ಅಷ್ಟು ಕಷ್ಟದಿಂದ ಬೀದಿ ಬೀದಿ ಅಲೆದು ಮಾಡಿರತಕ್ಕ ಸಕ್ಕರೆ ಕಾರ್ಖಾನೆಯನ್ನು ೧ ಲಕ್ಷ ರೂಪಾಯಿಗಳಿಗೆ ಮಾರಿದರೆ ಹೇಗೆ ? ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲವೆ ? ಅಧಿಕಾರಿಗಳನ್ನು ಕರೆದು ಹಣ ಕೊಟ್ಟು ನಡೆಸಿ. ಸರ್ಕಾರ ನಡೆಸುವುದಕ್ಕೆ ಏನು ಕಷ್ಟ ? ಜೋಡೆಯವರು ಹೇಗೆ ನಡೆಸುತ್ತಾರೆ ಅವರು ಅಲ್ಲಿ ಡಿಸ್ಟಿಲರಿ ಮಾಡುತ್ತಾರೇನು ? ಮಾನ್ಯ ಮಂತ್ರಿಗಳು ಬೆಳಗಾಂನಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಯಾವ್ಯಾವ ಸಕ್ಕರೆ ಕಾರ್ಖಾನೆಗಳು ಲಾಸಿನಲ್ಲಿವೆ ಅವುಗಳನ್ನು ಪುನರ್ ಪರಿಶೀಲನೆ ಮಾಡಲಿಕ್ಕೆ ರಾಜ್ಯಮಟ್ಟದಲ್ಲಿ ಒಂದು ಕಮಿಟಿ ಮಾಡುತ್ತೇವೆಂದು ಹೇಳಿದ್ದಾರೆ ಯಾವ ಆಧಾರದ ಮೇಲೆ ಮಾಡುತ್ತೀರಿ ?.

ಶ್ರೀ ಆರ್. ಬಿ. ಪೋತ್‌ದಾರ್.—ಈ ಕವಿಟಿ ಮಾಡಿ ಮುರ್ನಾಲ್ಕು ದಿವಸ ಆಯಿತು.

ಶ್ರೀ ಎಂ. ಎಸ್. ಪಾಟೀಲ್.—ಸಕ್ಕರೆ ಕಾರ್ಖಾನೆಯನ್ನು ೧ ಲಕ್ಷ ರೂಪಾಯಿಗಳಿಗೆ ಮಾರಲಿಕ್ಕೆ ನಿಮಗೆ ಯಾವ ಅಧಿಕಾರವಿದೆ ?

ಶ್ರೀ ಕೆ. ರಮೇಶ್‌ಕುಮಾರ್.—೧ಲಕ್ಷ ರೂಪಾಯಿ ಕೊಡುತ್ತೇನೆ ನನಗೆ ಕೊಡಿ ಸ್ವಾಮಿ.

SRI R. B. POTDAR.—Factory is sold for 5.49 crores-

SRI RAMESH KUMAR.—I am prepared to buy it for Rs. 2 lakhs.

ಶ್ರೀ ಎಂ. ಎಸ್. ಪಾಟೀಲ್.—೧ ಲಕ್ಷ ರೂಪಾಯಿಗೆ ಕೊಟ್ಟರೆ ಸರ್ಕಾರ ಏತಕ್ಕೆ ನಡೆಸಬೇಕು.

ಅಧ್ಯಕ್ಷರು.—ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ ಸಾಧ್ಯವಾದರೆ ಅರ್ಧಗಂಟೆ ಚರ್ಚೆಗೆ ಇದಕ್ಕೆ ಅವಕಾಶ ಮಾಡೋಣ. ಮೊದಲು ಮಂತ್ರಿಗಳು ಉತ್ತರ ಕೊಡಲಿ, ಈಗ ಮಾನ್ಯ ದೇವೇಗೌಡರು ಮತ್ತು ಜಾಲಪ್ಪನವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ... ...

ಶ್ರೀ ಆರ್. ಎಲ್. ಜಾಲಪ್ಪ.—ಇವರಿಗೆ ಉತ್ತರ ಬೇಡವೆ ? ಈರೀತಿ ಕೂಗಾಡಿದರೆ ಹೇಗೆ ? ಪ್ರತಿಯೊಂದು ಸಲ ಪ್ರತಿಯೊಂದು ವಿಚಾರಕ್ಕೂ ಈ ರೀತಿ ಕೂಗಾಡಿದರೆ ನಾವೇನು ಮಾಡುವುದು ? ತಾವು ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಜಾಲಪ್ಪನವರು ಬೇರೆ ಖಾತೆ ಮಂತ್ರಿಗಳು ಇವರೇನು ಬೃಹಸ್ಪತಿಗಳೇನು ? ಸಂಬಂಧಪಟ್ಟ ಮಂತ್ರಿಗಳಿದ್ದಾರೆ ಅವರು ಉತ್ತರ ಹೇಳಲಿ ? ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ೧ಲಕ್ಷ ರೂಪಾಯಿಗೆ ಕೊಟ್ಟಿರುವುದಕ್ಕೆ ಕೇಳುತ್ತಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ.—ನಮಗೂ ಜಂಟೀ ಜವಾಬ್ದಾರಿ ಇದೆ.

ಅಧ್ಯಕ್ಷರು.—ತಾವು ಸಮಾಧಾನ ಮಾಡಿಕೊಳ್ಳಿ.

ಶ್ರೀ ಆರ್. ಎಲ್. ಜಾಲಪ್ಪ.—ಕೂಗಾಡುವುದೇ ಸರಿಯೆಂದು ಅವರು ತಿಳಿದುಕೊಂಡಿದ್ದಾರೆ.

ಶ್ರೀ ಎಂ. ಎಸ್. ಪಾಟೀಲ್.—ಮಂತ್ರಿಗಳು ತಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಾವು ಇಲ್ಲಿ ಕೂಗಾಡುವುದಕ್ಕೆ ಬಂದಿಲ್ಲ. ಅವರು ಹಿರಿಯ ಸದಸ್ಯರು ಈ ರೀತಿ ಮಾತನಾಡುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇವೆ. ನಾವು ಪ್ರಶ್ನೆಯನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಕೇಳುತ್ತಿದ್ದೇವೆ. ಕೂಗಾಡುವುದಕ್ಕೆ ಬಂದಿದ್ದಾರೆಂದರೆ ಏನು ಅರ್ಥ ? ಬಾಯಿ ಸ್ವಲ್ಪ ಬಿಗಿಹಿಡಿದು ಮಾತನಾಡಬೇಕು. ಪೋಲೀಸ್ ಡಿಪಾರ್ಟ್‌ಮೆಂಟಿಗೆ ಬಂದ ಮೇಲೆ ನಾಲಿಗೆ ಸಡಿಲವಾಗಿದೆ. ಈ ತರಹ ಲೂಸ್ ಬಿಡಬಾರದು. ನಾವೇನಾದರೂ ಅನ್‌ಪಾರ್ಲಿಮೆಂಟರಿ ಮಾತನಾಡುತ್ತಿದ್ದೇವೆಯೇ ? ನಿಮಗೆ ವಿರುದ್ಧ ಮಾತನಾಡಿದರೆ ಅವರು ಹೇಗೆ ? ಬೇಕಾಗಿತ್ತು. ಅದನ್ನು ಬಿಟ್ಟು ಕೂಗಾಡುವುದಕ್ಕೆ ಬಂದಿದ್ದಾರೆಂದು ಲೈಟಾಗಿ ಮಾತನಾಡಿದರೆ ಹೇಗೆ ಳ

ಅಧ್ಯಕ್ಷರು.—ತಾವು ಸಿಟ್ಟು ಮಾಡಿಕೊಳ್ಳಬಾರದು. ವಿರೋಧಪಕ್ಷದ ಸದಸ್ಯರು ಒಂದು ಪಕ್ಷ ಏನೇ ಮಾತನಾಡಿದರೂ ಎಲ್ಲಾ ಮಂತ್ರಿಗಳು ಸಮುದ್ರ ಇದ್ದಹಾಗೆ ಇರಬೇಕೆಂದು ಹೇಳುತ್ತೇನೆ.

೧೧-೦೦ಎ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಷ್ಟು ಮಟ್ಟಿಗೆ ತಮ್ಮ ಗಮನ ಸೆಳೆಯಬೇಕೆಂದು ನಾವು ಮಾತನಾಡಿದ್ದೇವೆ.

ಅಧ್ಯಕ್ಷರು.—ನೀವು ಶಾಂತ ಸಮುದ್ರದ ಹಾಗೆ ಇರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ—ನಾವು ಹೇಳಿದ್ದು ಸರಿಯಿಲ್ಲವೆಂದರೆ ಅವಿಚಾರ ಬೇರೆ.

ಅಧ್ಯಕ್ಷರು.—ನಿವು ಸ್ವಲ್ಪ ಸಿಟ್ಟಿನ ಭರದಲ್ಲಿ ಮಾತನಾಡಿದರೂ ಮಾನ್ಯ ಮಂತ್ರಿಗಳು ಸಮಾಧಾನ ವಾಗಿರಬೇಕೆಂದು ನಾನು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಸಿಟ್ಟಿನ ಭರದಲ್ಲಿ ಅನ್‌ಪಾರ್ಲಿಮೆಂಟರಿ ಶಬ್ದಗಳನ್ನು ಉಪಯೋಗಿಸಿದ್ದರೆ, ಅಥವಾ ತಮ್ಮ ನಡವಳಿಕೆ ವಿರುದ್ಧ ಮಾತನಾಡಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು.—ನೀವು ಅನ್‌ಪಾರ್ಲಿಮೆಂಟರಿಯಾಗಿ ಮಾತನಾಡಲಿಲ್ಲ. ನೀವು ಕುಳಿತುಕೊಳ್ಳಿ.

ಶ್ರೀ ಜಿ. ರಾಜೂಗೌಡ.—ನನ್ನದೂ ಒಂದು ಪ್ರಶ್ನೆ ಇದೆ. ನಾನು ಆ ಭಾಗದಿಂದ ಬಂದಿರತಕ್ಕವನು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ನೀವು ಕುಳಿತುಕೊಳ್ಳಿ. ನಿಮಗೆ ಉತ್ತರ ಬೇಕೋ ಬೇಡವೋ ?

ಶ್ರೀ ಜಿ. ರಾಜೂಗೌಡ.—ಅಧ್ಯಕ್ಷರೇ.....

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಜಿ. ರಾಜೂಗೌಡ.—ರೆಕಾರ್ಡ್ ಯಾರಿಗೆ ಬೇಕು ಸ್ವಾಮಿ ?

(ಗೊಂದಲ)

SRI R. B. POTDAR.—Rupees one lakh was as an earnest money. It was only a deposit at the time of sale agreement.....
ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಏನು ಕೊಟ್ಟಿದ್ದಾರೆ ?

SRI R. B. POTDAR.—Already he has given the first instalment,.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಹೇಳಿದ್ದನ್ನು ಕೇಳುವುದಿಲ್ಲ ಎಂದು ಹೇಳಿದರೆ ಹೇಗೆ?
ಅಧ್ಯಕ್ಷರು.—ಎಲ್ಲರೂ ಮಾತನಾಡಿದ್ದಾರೆ. ಶ್ರೀಮತಿ ಲೀಲಾದೇವಿಯವರು, ಶ್ರೀ ರಮೇಶ್ ಕುಮಾರ್ ಅವರೂ ಸಹ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೫ಕೋಟಿ ೬೫ಲಕ್ಷ ರೂಪಾಯಿಗಳ ಆಸ್ತಿಯಲ್ಲಿ ೭ಲಕ್ಷ ರೂಪಾಯಿ ಅಡ್ವಾನ್ಸ್ ತೆಗೆದುಕೊಂಡು ಮಂಜೂರು ಮಾಡಿದ್ದಾರೆ. ನಮಗೆ ಸಮರ್ಪಕವಾದ ಉತ್ತರ ಬೇಕು.

ಅಧ್ಯಕ್ಷರು.—ಸಮರ್ಪಕವಾದ ಉತ್ತರ ಮಂತ್ರಿಗಳಿಂದ ದೊರೆಯಲಿಲ್ಲ ಎಂದರೆ ನಿಮಗೆ ಇರುವ ಉಪಾಯ ಎಂದರೆ ಅರ್ಧ ಗಂಟೆ ಚರ್ಚೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಸರಿಯಾಗುವುದಿಲ್ಲ. ನಾವು ಕೇಳತಕ್ಕದ್ದು ನೇರವಾದ ಪ್ರಶ್ನೆ. ಒಂದು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಕಾರ್ಖಾನೆಯನ್ನು ಹ್ಯಾಂಡ್ ಓವರ್ ಮಾಡತಕ್ಕಂಥ ಅವಶ್ಯಕತೆ ಏನಿತ್ತು ?

ಶ್ರೀ ಆರ್. ಬಿ. ಪೋತ್ದಾರ್.—ಹ್ಯಾಂಡ್ ಓವರ್ ಮಾಡಲಿಲ್ಲ. It am telling you Rs. one lakh is earnest money deposited at the time of sale agreement. Factory was not handed over at that time...

ಶ್ರೀ ಪಾಟ್ಟಣಗೌಡ ಎಸ್. ಪಾಟೀಲ್.—ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು.—ಈ ತರಹ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಯಾವುದೂ ಕೂಡ ರೆಕಾರ್ಡ್ ಆಗುವುದಿಲ್ಲ. ಶ್ರೀ ದೇವೇಗೌಡರು ಎದ್ದು ನಿಂತಿದ್ದಾರೆ. ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಉತ್ತರ ಕೊಡಲಿಕ್ಕೆ ಎದ್ದು ನಿಂತಿಲ್ಲ. ನನ್ನ ಹತ್ತಿರ ಸಂಪೂರ್ಣ ಮಾಹಿತಿ ಇಲ್ಲ. ಮಾಹಿತಿ ಇಟ್ಟುಕೊಂಡು ಉತ್ತರ ಕೊಡಬೇಕಾಗುತ್ತದೆ. ತಮ್ಮ ಆಫಿಸಿನಲ್ಲಿರತಕ್ಕ ಒಂದು ಕರಡು ಪ್ರತಿಯ ಉತ್ತರ ಇದೆ, ಅವನ್ನು ತರಿಸಿ ನೋಡಿದೆ. ನೀವು ಈ ವಿಷಯದಲ್ಲಿ ಎಷ್ಟು ತೀವ್ರವಾದ ಕಾಳಜಿ ವಹಿಸುತ್ತಿದ್ದೀರೋ, ಅದಕ್ಕೆ ಕಡಿಮೆ ಇಲ್ಲದಂತೆ ನನ್ನ ಕಡೆಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್, ಶ್ರೀ ವೀರಾಂತ ಹೆಮ್ಮಿಗೆ ಮತ್ತು ಇನ್ನೂ ಅನೇಕರು ಕಠಿಣವಾದ ಪದಗಳನ್ನು ಬಳಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಇಷ್ಟೇ ನಾನು ಹೇಳತಕ್ಕದ್ದು.. ಅವರ ಹತ್ತಿರ ಹೆಚ್ಚಿನ ಮಾಹಿತಿ ಇರಬಹುದು. ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ. ಸರ್ಕಾರ ಇದರಲ್ಲಿ ತಪ್ಪು ಹೆಜ್ಜೆ ಇಟ್ಟಿದ್ದರೆ ಹೆಚ್ಚಿನ ವಿವರಣೆ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ.

ಕೇಂದ್ರ ಸರ್ಕಾರಕ್ಕೆ ಬರಗಾಲ ಪರಿಹಾರಕ್ಕೆ ರಾಜ್ಯ ಸರ್ಕಾರದವರ ಮನವಿಯ ಬಗ್ಗೆ

೯೯ (೧೫೬) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ). —ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೇಂದ್ರ ಸರಕಾರವು ನೇರವಾಗಿಯೇ ಬರ ಪರಿಹಾರಕ್ಕೆಂದು ಯಾವುದೇ ಮರಳಿ ಪಾವತಿ ಮಾಡುವ ಮುಂಬರುವ ಯೋಜನಾ ವೆಚ್ಚದಲ್ಲಿ ಮುರಿದುಕೊಳ್ಳದೇ ಕಟ್ಟು ಕರಾರು ಹಾಕದೇ ರಾಜ್ಯ ಸರ್ಕಾರಕ್ಕೆ ಕೂಡ ಮಾರಿದ ಹಣ ಎಷ್ಟು? (೧೯೮೫, ೧೯೮೬, ಮತ್ತು ೧೯೮೭ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಬರಗಾಲ ಪರಿಹಾರಕ್ಕೆ ಕೊಟ್ಟ ಹಣ ವಿವರಣೆ ಒದಗಿಸುವುದು).

ಆ) ಕೇಂದ್ರ ಸರ್ಕಾರಕ್ಕೆ ಬರಗಾಲ ಪರಿಹಾರಕ್ಕೆ ರಾಜ್ಯ ಸರ್ಕಾರದವರು ಈಗ ಏನಾದರೂ ಮನವಿ ಸಲ್ಲಿಸಿದ್ದಾರೆಯೆ ?

ಇ) ಹಾಗಿದ್ದಲ್ಲಿ ಯಾವ ರೀತಿ ಮನವಿ ಸಲ್ಲಿಸಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—

ಅ) ಸಾಮಾನ್ಯವಾಗಿ ಕೇಂದ್ರವು ರಾಜ್ಯ ಸರ್ಕಾರಗಳಿಗೆ ಅಭಾವ ಪರಿಹಾರಕ್ಕೆಂದು ಒದಗಿಸಿಕೊಡುವ ಕೇಂದ್ರ ಧನ ಸಹಾಯವನ್ನು ಯೋಜನಾ ಮುಂಗಡದ ಹಣವೆಂದು ಪರಿಗಣಿಸಿ ಕೊಡುತ್ತದೆ. ಹೀಗೆ ಕೊಡಲ್ಪಡುವ ಹಣವನ್ನು ಸಾಮಾನ್ಯವಾಗಿ ರಾಜ್ಯ ಸರ್ಕಾರದ ಒಟ್ಟು ಯೋಜನಾ ಮಿತಿಯ ಪ್ರತಿ ಶತ ೫ರಷ್ಟು ಸೀಮಿತವಾಗಿ ಒದಗಿಸಿಕೊಡುತ್ತದೆ. ಹೀಗೆ ಕೇಂದ್ರ ಸರ್ಕಾರವು ಕೂಡಮಾಡಿದ ಧನ ಸಹಾಯದ ವಿವರಗಳು ಈ ಕೆಳಕಂಡತಿವೆ.

೧.	೧೯೮೪-೮೫	೩೨.೭೩ ಕೋಟಿ	ರೂಪಾಯಿಗಳು
೨.	೧೯೮೫-೮೬	೫೨.೪೨	ಡಿಟೋ
೩.	೧೯೮೬-೮೭	೫೩.೮೨	ಡಿಟೋ

ಆ) ಹೌದು.

ಇ) ಈ ಮನವಿ ಪತ್ರದಲ್ಲಿ ಒಟ್ಟು ೨೦೯.೦೦ ಕೋಟಿ ರೂಪಾಯಿಗಳು ಕೇಂದ್ರ ಧನ ಸಹಾಯವನ್ನು ಕೋರಲಾಗಿದೆ. ಈ ಮನವಿ ಪತ್ರದ ಒಂದು ಪ್ರತಿಯನ್ನು ಮಾನ್ಯ ಸದಸ್ಯರಿಗೆ ಈಗಾಗಲೇ ಒದಗಿಸಿಕೊಡಲಾಗಿದೆ.